(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ

ಅಭಿಯಾಚನೆ ಕ್ರಮಾಂಕ ೨೪—ವಾಹನ ತೆರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೮,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೮—ರಸ್ತೆ ಸಾರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧,೦೦,೮೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧,೩೨,೫೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೧—ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡಂವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦ ೮೦,೭೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೭೭,೭೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನಂದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ನಿಯಮ ೬೮ರ ಮೇರೆಗೆ ಚರ್ಚೆ

ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರು ಪ್ರದೇಶದಲ್ಲಿ ರಕ್ಷಿತ ಪ್ರದೇಶವಾದ ಹೊಸ ಮಂಗಳೂರು ಬಂದರು ಸಂಸ್ಥೆಗೆ ಪ್ರವೇಶಿಸಿ ಅರಣ್ಯರಕ್ಷಕರು ನಡೆಸಿದ ದೌರ್ಜನ್ಯಗಳ ಬಗ್ಗೆ

ವೈಸ್ ಚೇರ್‌ಮನ್.—ಈಗ ೬೮ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರಿ ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯನ್ನು ನಡೆಸುವುದು.

ಶ್ರೀ ವೇದಾಂತ ಹೆಬ್ಳಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಒಂದು ಪ್ರಾಮುಖ್ಯವಾದ ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ಈ ಸರ್ಕಾರದ ನೈತಿಕತೆ ರಾಜಕೀಯ ಸಾಮರ್ಥ್ಯ ಹಾಗೂ ಗೃಹಖಾತೆಯ ಮೇಲೆ ಒಂದು ರೀತಿಯ ತೇಜೋವಧೆ ಮಾಡಿರುವ ಪಂತಹ ಐ.ಎ.ಎಸ್. ಅಧಿಕಾರಿ ಒಬ್ಬರ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಇದಕ್ಕೆ ತಾವು ನನಗೆ ೫ ನಿಮಿಷಗಳ ಕಾಲವನ್ನು ಕೊಡಬೇಕು.

ವೈಸ್ ಚೇರ್‌ಮನ್.—ನಿಮ್ಮ ಹೆಸರೂ ಸಹ ಈ ಪಟ್ಟಿಯಲ್ಲಿದೆ. ನಿಮಗೂ ಸಹ ಇದರ ಮೇಲೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಎಂಟೂವರೆ ಗಂಟೆಯಾಗಿದೆ. ಈ ಒಂದು ವಿಷಯದ ಮೇಲೆ ನಾವು ಚರ್ಚೆ ಮಾಡಲು ಎರಡರಿಂದ ಎರಡೂವರೆ ಗಂಟೆಗಳ ಕಾಲ ಸಮಯ ಬೇಕಾಗುತ್ತದೆ. ಏಕೆಂದರೆ ಅನೇಕ ಮಾನ್ಯ ಸದಸ್ಯರು ಇದರ ಮೇಲೆ ಮಾತನಾಡುವವರಿದ್ದಾರೆ. ಈ ಕಾರಣದಿಂದ ನಾನು ಎಲ್ಲರಿಗೂ ಅನುಕೂಲವಾಗುವಂತಹ ರೀತಿಯಲ್ಲಿ ಒಂದು ಸೂಚನೆಯನ್ನು ಕೊಡುತ್ತೇನೆ. ಅದೇನಂತರೆ, ನಾಳೆ ದಿವಸ ಕಂದಾಯ ಮತ್ತು ಯೋಜನಾ ಇಲಾಖೆಗಳ ಮೇಲಿನ

ಬೇಡಿಕೆಗಳಂ ಚರ್ಚೆಗೆ ಬರುತ್ತಿದೆ. ಬರಗಾಲದ ಬಗ್ಗೆ ಅಧ್ಯಯನ ಮಾಡಲು ನೇಮಕ ಮಾಡಿದಂಥ ಸಮಿತಿಯಂ ವರದಿ ಬಗ್ಗೆ ಸಹ ನಾಳೆ ಚರ್ಚೆ ಮಾಡಬೇಕಾಗುತ್ತದೆ. ಆದರೆ ಆ ಸಮಿತಿಯವರಂ ಕೊಟ್ಟ ವರದಿ ಈಗ ನಮ್ಮ ಮುಂದೆ ಇಲ್ಲ. ಈ ಕಾರಣದಿಂದ ಮುಂದೆ ಒಂದು ದಿನ ಈ ವರದಿ ಆಧಾರದ ಮೇಲೆ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ನಾಳೆ ಬರಗಾಲದ ಬಗ್ಗೆ ನಾವು ಹೆಚ್ಚಿನ ಚರ್ಚೆಗೆ ಹೋಗುವುದಿಲ್ಲ. ರೆವಿನ್ಯೂ ಖಾತೆಯ ಮೇಲೆ ಮಾತ್ರ ನಾಳೆ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳುವುದು ಒಳ್ಳೆಯದು.

ವೈಸ್ ಚೇರ್‌ಮನ್.—ನಿಯಮದ ಪ್ರಕಾರ ಈ ವಿಷಯದ ಬಗ್ಗೆ ಒಂದು ಗಂಟೆ ಕಾಲ ಮಾತ್ರ ಚರ್ಚೆ ನಡೆಸಬೇಕಾಗಿರುತ್ತದೆ.

ಶ್ರೀ ಎಸ್. ಬರಗಾರಪ್ಪ.—ಬಹಳ ಹೊತ್ತಾದ ಮೇಲೆ ನಾವು ಇಲ್ಲಿ ವಿವರವಾಗಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಮತ್ತು ಮಾನ್ಯ ಮಂತ್ರಿಗಳು ಒಪ್ಪುವುದಾದರೆ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಬಿ. ರಾಚಯ್ಯ.—ಈ ಬಗ್ಗೆ ಪತ್ರಿಕೆಗಳಲ್ಲಿ ಏನೋ ಪರದಿಯಾಗಿದೆ. ಅದಕ್ಕಾಗಿ ಈ ದಿನವೇ ಚರ್ಚೆಯಾಗಬೇಕೆಂದು ನೋಟೀಸ್ ಕೊಟ್ಟಿದ್ದರು. ಅದರ ಪ್ರಕಾರ ನಾನು ಉತ್ತರ ಕೊಡಲು ತಯಾರಾಗಿ ಬಂದಿದ್ದೇನೆ. ಆದರೆ ಈಗ ಅವರು ಇದನ್ನು ನಾಳೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆಯ ಡಿಮ್ಯಾಂಡ್ಸ್ ಎಲ್ಲ ಮುಗಿದ ಮೇಲೆ ಇದನ್ನು ತಾವು ತೆಗೆದುಕೊಳ್ಳಬೇಕು.

ವೈಸ್–ಚೇರ್‌ಮನ್.—ಆಗಬಹುದು. ಈಗ ಸಭೆಯನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಮುಂದೂಡಲಾಗಿದೆ.

ಸಭೆಯಂ ರಾತ್ರಿ ೮ ಗಂಟೆ ೨೮ ನಿಮಿಷಗಳಿಗೆ ಮುಂದೂಡಲ್ಪಟ್ಟಿ ನಾಳೆ ಅಂದರೆ ದಿನಾಂಕ ೩೦–೮–೧೯೮೫ರ ಶುಕ್ರವಾರ ಬೆಳಿಗ್ಗೆ ಹತ್ತು ಗಂಟೆಗೆ ಸೇರಲು ತೀರ್ಮಾನಿಸಲಾಯಿತು